# ಶೋಷಿತರ ಉದ್ಧಾರಕ್ಕಾಗಿ ಡಾ. ಬಿ. ಆರ್. ಅಂಬೇಡ್ಕರ್ ಅವರ ಚಿಂತನೆಗಳು

**ರವೀಂದ್ರ ಕೆ. ವಿ.**
ಸಂಶೋಧನಾ ವಿದ್ಯಾರ್ಥಿ
ಕನ್ನಡ ಅಧ್ಯಯನ ಕೇಂದ್ರ
ಬೆಂಗಳೂರು ವಿಶ್ವವಿದ್ಯಾಲಯ
ಜ್ಞಾನಭಾರತಿ ಆವರಣ
ಬೆಂಗಳೂರು –560056.

**Article Link: https://aksharasurya.com/2023/05/ravindra-k-v-3/**

ಭಾರತದಲ್ಲಿ ಶತ ಶತಮಾನಗಳಿಂದ ಸಾಮಾಜಿಕವಾಗಿ, ಧಾರ್ಮಿಕವಾಗಿ, ಶೈಕ್ಷಣಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ, ಶೋಷಣೆ ಮತ್ತು ತುಳಿತಕ್ಕೆ ಒಳಗಾದವರ ಬಗ್ಗೆ ಸದಾ ಕಾಳಜಿ ಮತ್ತು ಚಿಂತನೆಯನ್ನು ಮಾಡುತ್ತಿದ್ದವರಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರು ಮೊದಲಿಗರಾಗಿದ್ದಾರೆ. "ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಜಗತ್ತಿನಲ್ಲಿ ಜ್ಞಾನವಂತರು ಅಂತ ಪಟ್ಟಿ ತಯಾರಿಸಿದ್ದಲ್ಲಿ ಮೊದಲನೇಯವರಾಗಿರುತ್ತಾರೆ. ಅವರ ಜ್ಞಾನದಾಹಕ್ಕೆ ಸಿಗದ ವಿಷಯ ಯಾವುದು ಇರಲಿಲ್ಲ. ಅವರ ಪ್ರತಿಭೆಗೆ ನಿಲುಕದ ವಿಷಯಗಳೇ ಇರಲಿಲ್ಲ. ತಮ್ಮ ಕಾಲಾವಧಿಯನ್ನು ಮೆಟ್ಟು ನಿಂತು ರಾಷ್ಟ್ರೀಯತಾವಾದಿ, ಕಾನೂನು ತಜ್ಞ, ರಾಜಕೀಯ ನೇತಾರ, ಕ್ರಿಯಾಶೀಲ ಸಾಮಾಜಿಕ ಕಾರ್ಯಕರ್ತ, ಶ್ರೇಷ್ಠ ಇತಿಹಾಸಕ್ಕೂ ಮಹಾದರ್ಶನಿಕ, ಅಪ್ರತಿಮ ಜಾತಕ, ಮಾನವ ಶಾಸ್ತ್ರಜ್ಞ, ಖ್ಯಾತ ಅರ್ಥಶಾಸ್ತ್ರಜ್ಞರಾಗಿ, ಸಮೃದ್ಧ ಬರಹಗಾರನಾಗಿ, ಕ್ರಾಂತಿಕಾರಿಯಾಗಿ, ಅಸಮಾನ್ಯ ವಾಕ್ಪಟುವಾಗಿ, ಆಧುನಿಕ ಬೋಧಿಸತ್ವರಾಗಿ, ಭಾರತ ಸಂವಿಧಾನದ ಪ್ರಮುಖ ಶಿಲ್ಪಿಯಾಗಿ, ಅವರ ಸಾಧನೆ, ಚಿಂತನೆ ಅಗಾಧವಾದದ್ದು, ಒಬ್ಬ ವ್ಯಕ್ತಿ ಒಂದು ಜೀವಮಾನದಲ್ಲಿ ಇಷ್ಟೆಲ್ಲಾ ಮಾಡಲು ಸಾಧ್ಯವೇ? ಎನ್ನುವ ಪ್ರಶ್ನೆಗೆ ಉತ್ತರವಾಗಿ ನಿಲ್ಲುತ್ತಾರೆ".[1]

ಅಂಬೇಡ್ಕರ್ ಅವರು ಬುದ್ಧ, ಕಬೀರ ಮತ್ತು ಪುಲೆಯವರನ್ನು ತಮ್ಮ ಗುರುಗಳೆಂದು ನಂಬಿದ್ದು ಎಲ್ಲ ಶೋಷಿತ ಜನಾಂಗಕ್ಕೆ ಮಾನವತೆಯ ಪಾಠವನ್ನು ಹೇಳಿಕೊಡುವುದಕ್ಕೆ ಕಾರಣವಾಯಿತು. ಅದೇ ರೀತಿಯಾಗಿ ಜ್ಞಾನ, ಆತ್ಮಗೌರವ ಮತ್ತು ಶೀಲ ಇವುಗಳು ದೇವರುಗಳೆಂದು ಇವುಗಳಿಂದ ಮನುಕುಲದ ಶಾಂತಿ ಮತ್ತು ಅಂತಸ್ತು ಸಾಧ್ಯವೆಂದು ಹೇಳಿದ್ದಾರೆ. ಜೊತೆಗೆ 'ಶಿಕ್ಷಣ' 'ಸಂಘಟನೆ' 'ಹೋರಾಟ'

ಈ ತತ್ವದ ಅಡಿಯಲ್ಲಿ ಸಮಾನತೆಯನ್ನು ಪಡೆಯಲು ಸಾಧ್ಯವೆಂದು ಸಂದೇಶವನ್ನು ನೀಡಿದ್ದಾರೆ. ಅಲ್ಲದೆ ಶೋಷಣೆಗೊಳಗಾದವರು ಮತ್ತು ಜನಸಾಮಾನ್ಯರ ಉಜ್ವಲ ಭವಿಷ್ಯಕ್ಕಾಗಿ ಹೋರಾಟಗಳನ್ನು ಮಾಡಿ ಅವರು ಸ್ವಾಭಿಮಾನದಿಂದ ಬದುಕಲು ಮುನ್ನುಡಿಯನ್ನು ಬರೆದರು. ಸಕಲ ಮಾನವ ಕುಲದ ಸಮಾನತೆಗಾಗಿ ದುಡಿದ ಅಂಬೇಡ್ಕರ್‌ರವರು ದಲಿತ ಪರ, ಮಹಿಳೆಯರ ಪರ, ಅಲ್ಪಸಂಖ್ಯಾತರ ಪರ, ಕಾರ್ಮಿಕರ ಪರ, ಧ್ವನಿ ಎತ್ತಿ ಹೋರಾಟಗಳನ್ನು ಮಾಡಿದ್ದಲ್ಲದೆ ಸಮಾಜದ ಕಟ್ಟ ಕಡೆಯ ವ್ಯಕ್ತಿಯು ಎಲ್ಲ ರೀತಿಯ ಸೌಲಭ್ಯಗಳನ್ನು ಪಡೆದು ಸ್ವಾಭಿಮಾನ ಮತ್ತು ಆತ್ಮಭಿಮಾನದಿಂದ ಬದುಕಬೇಕೆಂಬ ಆಶಯವನ್ನು ಹೊಂದಿದ್ದ ಡಾ.ಬಿ.ಅರ್. ಅಂಬೇಡ್ಕರ್ ಅವರು ಶ್ರಮೀಸಿದ್ದಾರೆ.

"ಭಾರತದ ಹಾಗೂ ಸಮಾಜದ ಕೆಲವೇ ಕೆಲವು ಸ್ವಾರ್ಥ ಮೇಲೆ ವರ್ಗದವರ ಸ್ವಾರ್ಥಕ್ಕಾಗಿ ಇಡೀ ಸಮಾಜದ ಎಲ್ಲಾ ಸಮುದಾಯಗಳನ್ನು ಶತಶತಮಾನಗಳ ಕಾಲ ಅಮಾನವೀಯ ಬದುಕು ಅನ್ನುವುದಕ್ಕಿಂತ ನರಕಯಾತನೆಯ ಹೀನ ಬದುಕಾಗಿ ಮಾಡಿದ ಮನು ತನ್ನ ಮನುಸ್ಮೃತಿಯಲ್ಲಿ

* ಶಿಕ್ಷೆರದಿಂದ ವಂಚಿತರನ್ನಾಗಿಸಿದ
* ಉಡುಗೆ ತೊಡೆಗೆಗಳಿಂದ ವಂಚಿತರನ್ನಾಗಿಸಿದ
* ಕುಡಿಯುವ ನೀರಿಗಾಗಿ ಪರಿತಪಿಸುವಂತೆ ಮಾಡಿದ
* ಬೌದ್ಧ ಸಾಹಿತ್ಯ ಸುಟ್ಟುಬಿಟ್ಟ
* ದೇವಾಲಯ ಪ್ರವೇಶ ನಿಷೇಧಿಸಿದ
* ಸಮುದಾಯಗಳನ್ನು ಅಂತ್ಯಜರನ್ನಾಗಿ ಮಾಡಿದ
* ಧರ್ಮಾಂತರಕ್ಕೆ ಅವಕಾಶ ಇರಲಿಲ್ಲ".[2]

ಈ ಮೇಲ್ಕಂಡ ವಿಷಯಗಳಲ್ಲಿ ಮನೋಧರ್ಮವಾದಿಗಳು ತಳಸಮುದಾಯಗಳನ್ನು ಶೋಷಣೆಗೆ ಒಳಪಡಿಸುತ್ತಿದ್ದರು, ಅಂತಹ ಸಂದರ್ಭದಲ್ಲಿ ಡಾ.ಬಿ.ಆರ್ ಅಂಬೇಡ್ಕರ್‌ರವರು ತಮ್ಮ ಹೋರಾಟ ಮತ್ತು ಚಳುವಳಿಗಳ ಸಂದರ್ಭದಲ್ಲಿ ಅಂದರೆ 1923 ರಂದು ಮನುಸ್ಮೃತಿಯನ್ನು ಸುಟ್ಟು ಹಾಕಿದರು. 1927ರಲ್ಲಿ ಮಾಹಾಡದಲ್ಲಿ "ಚೌಡರ ಕೆರೆ ಸತ್ಯಾಗ್ರಹ"ದ ಮೂಲಕ ಅಸ್ಪೃಶ್ಯರಿಗೆ ಕುಡಿಯುವ ನೀರಿನ ಅವಕಾಶವನ್ನು, 'ನಾಸಿಕ'ದ ಕಾಳಾರಾಮ್ ದೇವಾಲಯವನ್ನು

ಪ್ರವೇಶಿಸುವ ಮೂಲಕ ಧಾರ್ಮಿಕ ಹಕ್ಕನ್ನು ಕಲ್ಪಿಸಿಕೊಟ್ಟರು. ಅಲ್ಲದೆ 1932ರಲ್ಲಿ 'ಪೂನಾ ಒಪ್ಪಂದ' ಮಾಡಿಕೊಳ್ಳುವುದರ ಮೂಲಕ ಅಸ್ಪೃಶ್ಯರಿಗೆ ಸಾಮಾಜಿಕ ನ್ಯಾಯವನ್ನು ಕಲ್ಪಿಸಿಕೊಟ್ಟರು. ಅದೇ ರೀತಿಯಾಗಿ ಮಹಿಳೆಯರನ್ನು ಭೋಗದ ವಸ್ತುವಾಗಿ ಪರಿಗಣಿಸಿದ ಪುರೋಹಿತಶಾಹಿ ಪುರುಷ ಪ್ರಧಾನ ಸಮಾಜದ ವಿರುದ್ಧ ತಿರುಗಿಬಿದ್ದುದ್ದಿಲ್ಲದೆ ಮಹಿಳೆಗೆ ಸಾಮಾಜಿಕ ಸಮಾನ ಹಕ್ಕುಗಳನ್ನು ನೀಡುವಂತೆ 'ಹಿಂದೂ ಕೋಡ್ ಬಿಲ್ಲನ್ನು' ಮಂಡನೆ ಮಾಡುತ್ತಾರೆ. ಆದರೆ ಇದನ್ನು ಸರ್ಕಾರ ನಿರಾಕರಿಸಿದ ಸಂದರ್ಭದಲ್ಲಿ ತನ್ನ ಅಧಿಕಾರಕ್ಕೆ ರಾಜೀನಾಮೆಯನ್ನು ನೀಡುತ್ತಾರೆ. ಅಂಬೇಡ್ಕರ್‌ರವರು ತಮ್ಮ ಜೀವತಾವಧಿಯಲ್ಲಿ ಇಂತಹ ಹಲವಾರು ಸಮಾಜಘಾತಕ ಆಚರಣೆ, ನಂಬಿಕೆ ಮತ್ತು ಪದ್ಧತಿಗಳನ್ನು ನಿವಾರಿಸಿ ಸರಿಯಾದ ಮಾರ್ಗ ಮತ್ತು ದರ್ಶನವನ್ನು ತೋರಿಸಿದ ಇವರು ಚರಿತ್ರೆಯಲ್ಲಿ ಸಮಾಜ ಪರಿವರ್ತನಾಕಾರರಾಗಿ ಸ್ಥಾನವನ್ನು ಗಿಟ್ಟಿಸಿಕೊಂಡಿದ್ದಾರೆ. ಮಹಾದಾರ್ಶನಿಕರಾದ ಡಾ. ಬಿ. ಆರ್. ಅಂಬೇಡ್ಕರ್‌ರವರು ದೇಶದಲ್ಲಿ ಅಸಮಾನತೆ ತೊಳಗಿ ಸಾಮಾಜಿಕವಾಗಿ ಎಲ್ಲರೂ ಸಮಾನತೆಯಿಂದ ಬದುಕಬೇಕೆಂಬ ಅಶಯವನ್ನು ಹೊಂದಿದ್ದರು. "1939ರಲ್ಲಿ ನಾನು ನನ್ನ ಸಮಾಜಕ್ಕಾಗಿ ಸಾಯಲು ಸಿದ್ಧವೆಂದು ಬಾಬಾ ಸಾಹೇಬರು ಬೆಳಗಾವಿಯಲ್ಲಿ ಘೋಷಿಸುತ್ತಾರೆ. 1942ರಲ್ಲಿ "What congress and have in to untouchable" ಗ್ರಂಥ ಬರೆಯಲು ಪ್ರಾರಂಭಿಸುತ್ತಾರೆ. 1946ರಲ್ಲಿ "ಶೂದ್ರರು ಮೊದಲು ಯಾರಾಗಿದ್ದರು?", "The problem of the Rupie", ಮತ್ತು "ಬ್ರಿಟಿಷ್ ಭಾರತದಲ್ಲಿ ಪ್ರಾಂತೀಯ ಹಣಕಾಸು", "ಜಾತಿ ನಿರ್ಮೂಲನೆ", "ಒಕ್ಕೂಟದೆದರು ಸ್ವಾತಂತ್ರ್ಯ", ಹಾಗೂ "ಪಾಕಿಸ್ತಾನ ಕುರಿತು ಚಿಂತನೆಗಳು", ಎಂಬ ಪುಸ್ತಕಗಳನ್ನು ಬರೆದು ಖ್ಯಾತರಾಗುತ್ತಾರೆ. ಅಗೇಯೇ ಸಂವಿಧಾನ ಸಮಿತಿಯಲ್ಲಿ ಏಳು ಜನ–ರಿದ್ದು, ಅವರೆಲ್ಲರ ಅನೇಕ ಅನಾನುಕೂಲತೆ ಮತ್ತು ಅಸಮಾನತೆಯ ಮಧ್ಯಯು ಏಕಾಂಗಿಯಾಗಿ ಭಾರತಕ್ಕೆ ಬೃಹತ್ ಆದ ಸಮಾನತೆ, ಸ್ವಾತಂತ್ರ್ಯ, ಜಾತ್ಯತೀತ, ಆಧಾರಿತ ಸಂವಿಧಾನ ರಚಿಸಿ 1950 ಜನವರಿ 26ರಂದು ಜಾರಿಗೆ ತರಲಾಗಿದೆ.

ಸಮಾಜ ಕಳಕಳಿಯುಳ್ಳ ಅಂಬೇಡ್ಕರ್ ಅವರು ಭವ್ಯ ಭಾರತ ನಿರ್ಮಾಣಕ್ಕಾಗಿ ಕಂಡುಕೊಂಡ ಮತ್ತು ಸೂಚಿಸಿದ ಚಿಂತನೆಗಳು.

1. ದೇವರೆಂಬುವುದು ಒಂದು ಅಭೂತ ಕಲ್ಪನೆ. ನಮ್ಮ ಕಷ್ಟ ನಷ್ಟಗಳಿಂದ ದಾಸ್ಯವನ್ನು ಬಗೆಹರಿಸಿಕೊಳ್ಳಬೇಕಾಗಿರುವುದು ನಾವೇ. ಅದರ ಬದಲಾಗಿ ದೇವರ ಮರೆ ಹೊಕ್ಕು ಯಾವುದೇ ಪ್ರಯತ್ನಗಳನ್ನು ಮಾಡದೆ ಕೈ ಚೆಲ್ಲಿ ಕುಳಿತುಕೊಂಡರೆ ನೀವು ಎಂದಿಗೂ ಮುಂದೆ ಬರಲು ಸಾಧ್ಯವಾಗುವುದಿಲ್ಲ.

ಅಸ್ಪೃಶ್ಯರು ಹಿಂದುಗಳಿನ್ನುವುದಾದರೆ ಅವರನ್ನು ದೇವಾಲಯಗಳಿಂದ ಹೊರಗಿರಿಸುವುದು ನ್ಯಾಯವಲ್ಲ.

2. ಸಮಾನ ಅವಕಾಶಗಳಿಗಾಗಿ ವಿದ್ಯಾಭ್ಯಾಸವೇ ಉತ್ಕರ್ಷವಾದ ಸಾಧನವಾಗಿದ್ದು ಅದಕ್ಕೆ ಮೊದಲ ಆದ್ಯತೆ ನೀಡಬೇಕು ಆಗ ಮಾತ್ರ ಸಮಾಜ ಉದ್ದಾರವಾಗುತ್ತದೆ.

3. ರಾಜ್ಯಾಧಿಕಾರಕ್ಕಾಗಿ ಸವರ್ಣೀಯರು ಬ್ರಿಟಿಷರ ಎದುರು ನಿಂತಿದ್ದು ನ್ಯಾಯವಾದರೆ ಅಧಿಕಾರಾವಕಾಶಗಳಿಗಾಗಿ ಅಸ್ಪೃಶ್ಯರು ಸವರ್ಣೀಯರ ಎದುರು ನಿಂತು ಸಮ ಪ್ರಮಾಣದಲ್ಲಿ ಅವಕಾಶಗಳನ್ನು ಪಡೆಯಬೇಕಾದದ್ದು ಆಜನ್ಮ ಸಿದ್ಧ ಹಕ್ಕು.

4. ಮತಾಂತರಗೊಳ್ಳುವುದರ ಮೂಲಕ ನೀವು ಏನಾದರೂ ಕಳೆದುಕೊಳ್ಳುವದಿದ್ದರೆ ಅದು ನಿಮ್ಮ ಸಂಕೊಲೆಗಳನ್ನು ಮಾತ್ರ.

5. ಒಬ್ಬ ವ್ಯಕ್ತಿ ತನ್ನ ವ್ಯಕ್ತಿತ್ವದ ಮೂಲಕ ಸ್ವಾಭಿಮಾನವನ್ನು ಸಾಧಿಸಲು ಸಾಧ್ಯ ಅದಕ್ಕಾಗಿ ತನ್ನ ಕಾಲ ಮೇಲೆ ತಾನು ನಿಲ್ಲಬೇಕು.

6. ನಾಯಕನಾದವನು ಧೈರ್ಯಶಾಲಿ ಆಗಿರಬೇಕು. ಧೈರ್ಯವಿಲ್ಲದವನು ಉತ್ತಮ ನಾಯಕನಾಗಲಾರ. ಧೈರ್ಯ ಇರುವ ನಾಯಕ ಎಂದು ಸಾಯುವುದಿಲ್ಲ. ಧೈರ್ಯ ಇಲ್ಲದ ನಾಯಕನು ಈಗಾಗಲೇ ಸತ್ತಿರುವನೆಂದು ತಿಳಿದುಕೊಳ್ಳಿ.

7. ನಿಮ್ಮೆದಿಯ ದೀವಿಗೆ ನಿಮ್ಮ ದಾರಿ ದೀಪವಾಗಬೇಕು ಎಂದು ಹೇಳಿದ ಅಂಬೇಡ್ಕರ್ ಪ್ರತಿಯೊಬ್ಬ ವ್ಯಕ್ತಿಯು ಸ್ವತಂತ್ರವಾಗಿ ಯೋಚಿಸಿ ಸತ್ಯದ ಸಾಧನೆಗಾಗಿ ತನ್ನ ವಿಚಾರಶಕ್ತಿಯನ್ನು ಬಳಸಿಕೊಳ್ಳಬೇಕೆಂದು ಹೇಳಿದಾರೆ.

8. ಸ್ವಹಿತ ಮತ್ತು ದೇಶಹಿತಗಳ ನಡುವೆ ಸಂಘರ್ಷವಾದಾಗ ಮೊದಲನೇಯದನ್ನು ಮರೆತು ಎರಡನೆಯದರ ಸಾಧನೆಗೆ ಕಂಕಣ ಬದ್ಧರಾಗಿರಬೇಕು. ಹಾಗೆಯೇ ರಾಷ್ಟ್ರ ಹಿತದ ಜೊತೆಗೆ ಅಸಹಾಯಕರು ಮತ್ತು ಅಸ್ಪೃಶ್ಯರ ಹಿತಕ್ಕಾಗಿ ದುಡಿಯುವವರಿಗೆ ಬೆಂಬಲ ನೀಡಬೇಕು.

9. ಜಾತಿ ಎಂಬುದು ಹಿಂದೂ ಧರ್ಮದ ಅವಿಭಾಜ್ಯ ಅಂಗವಾಗಿದ್ದು, ಜಾತಿ ಪದ್ಧತಿಯಿಂದಾಗಿ ಅಸ್ಪೃಶ್ಯರು ಸೃಷ್ಟಿಯಾಗಿದ್ದಾರೆ. ಈ ರೋಗ ತೀವ್ರವಾದಡೆ ಪ್ರಜಾಪ್ರಭುತ್ವ ಯಶಸ್ವಿಯಾಗಲಾರದು. ಜಾತಿ ಪದ್ಧತಿ ತೊಲಗಿದರೆ ಮಾತ್ರ

ಪ್ರೀತಿ ಹುಟ್ಟಲು ಸಾಧ್ಯ. ಪ್ರೀತಿ ಇದ್ದಾಗ ಮಾತ್ರ ಒಗ್ಗಟ್ಟು ಮೂಡಲು ಸಾಧ್ಯ. ಜಾತಿ ತೊಲಗದಿದ್ದರೆ ಸ್ವರಾಜದಲ್ಲೂ ಗುಲಾಮಗಿರಿ ಮುಂದುವರಿಯುತ್ತದೆ.

10. ಪುರೋಹಿತ ವ್ಯವಸ್ಥೆ ಜಾತಿಯೊಂದಕ್ಕೆ ಸೀಮಿತವಾಗಿದ್ದು ಪ್ರಜಾಪ್ರಭುತ್ವದ ಆಶಯಕ್ಕೆ ವಿರೋಧವಾಗಿದೆ. ಆದ್ದರಿಂದ ಮೊದಲಿಗೆ ಪುರೋಹಿತ ವ್ಯವಸ್ಥೆಯು ನಿರ್ಮೂಲನೆಯಾಗಬೇಕು.

11. ರೈತರು ಉಳಿಗಮಾನ್ಯ ಪದ್ಧತಿಯಿಂದ ಮುಕ್ತರಾಗಬೇಕಾಗಿದೆ.

12. ಮಾನವನು ವೈಜ್ಞಾನಿಕ ಬುದ್ಧಿ ಮತ್ತು ವೈಚಾರಿಕತೆಗಿಂತ ಕುರುಡು ನಂಬಿಕೆಗಳಲ್ಲಿ ಶ್ರದ್ಧೆ ಹೆಚ್ಚಾಗಿದ್ದು ಇದರಿಂದ ಹೊರ ಬರಬೇಕಾಗಿದೆ.

ಇನ್ನು ಮುಂತಾದ ಹಲವು ಚಿಂತನೆಗಳನ್ನು ಒಳಗೋಂಡಿರುವ ಅಂಬೇಡ್ಕರ್‌ರವನ್ನು ಭಾರತ ಮಾತ್ರವಲ್ಲದೇ ಇಡೀ ಭೂಮಂಡಲವೇ ಕಂಡಿಕೋಂಡ ಸಮಾಜ ಸುಧಾರಕರಾಗಿದ್ದಾರೆ.

ಮೇಲಿನ ಎಲ್ಲಾ ಚಿಂತನೆಗಳು ಈಡೇರಬೇಕು ಅಂದರೆ ಶಿಕ್ಷಣ ಒಂದೇ ಪರಿಹಾರ. ಶಿಕ್ಷಣವಿಲ್ಲದೆ ಸಮಾಜದಲ್ಲಿನ ಸಂಕೀರ್ಣತೆಯನ್ನು ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ, ಹಾಗೆಯೇ ಸಾಂಪ್ರದಾಯಿಕವಾಗಿ ವಿದ್ಯೆ ಕಲಿಯದೇ ಹೋದರೆ ಮುಂದಿನ ಪೀಳಿಗೆಯನ್ನು ಎಚ್ಚರಿಸಿ ಅರಿವು ನೀಡಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಪ್ರತಿಯೊಬ್ಬ ಅಸ್ಪೃಶ್ಯನು ವಿದ್ಯೆಯನ್ನು ಪಡೆದು ತಮ್ಮ ಮೇಲೆ ದಬ್ಬಾಳಿಕೆ ಮತ್ತು ದೌರ್ಜನ್ಯ ಎಸೆಗಿ ನೋವು ಕೊಡುತ್ತಿರುವವರ ವಿರುದ್ಧ ತಿರುಗಿ ನಿಲ್ಲದಿದ್ದರೆ ನೋವಿಗೆ ಪರಿಹಾರವಿಲ್ಲ. ಪ್ರತಿಯೊಬ್ಬ ಶೋಷಿತ ಮತ್ತು ಅಸ್ಪೃಶ್ಯನು 'ಶಿಕ್ಷಣ', 'ಸಂಘಟನೆ', 'ಹೋರಾಟ' ಈ ಮೂರು ತತ್ವಗಳಿಂದ ಸಂಘಟಿಕರಾದರೆ ಮಾತ್ರವೇ ಸ್ವ ಉದ್ಧಾರ, ಕುಟುಂಬ ಉದ್ಧಾರ, ಸಮುದಾಯದ ಉದ್ಧಾರ, ರಾಜ್ಯ ಉದ್ಧಾರ, ದೇಶ ಉದ್ಧಾರವಾಗುತ್ತದೆಂಬ ದೃಢಸಂಕಲ್ಪವನ್ನು ಅಂಬೇಡ್ಕರ್‌ರವರು ಹೊಂದಿದ್ದರು. ಅಲ್ಲದೆ ಆಧುನಿಕ ಭಾರತದಲ್ಲಿದ್ದ ಸಮಾಜಿಕ ಪಿಡುಗು ಆಗಿರುವ ಜಾತಿಪದ್ಧತಿಯನ್ನು ಚಳುವಳಿ ಮತ್ತು ಚಿಂತನೆಗಳ ಮೂಲಕ ಹೋಗಲಾಡಿಸಿ ದೇಶದಲ್ಲಿ ಸಮಾನತೆಯನ್ನು ತಂದು ದೇಶಾಭಿವೃದ್ಧಿಗೆ ಪ್ರಯತ್ನಿಸಿದ ಮಹಾನ್ ಸಮಾಜ ಸುಧಾರಕನೆಂಬ ಘನತೆ ಡಾ.ಬಿ .ಆರ್ ಅಂಬೇಡ್ಕರ್ ಅವರಿಗೆ ಸಲ್ಲುತ್ತದೆ.

**ಕೋನೆ ಟಿಪ್ಪಣಿಗಳು**

1. ಸಾಮಾಜಿಕ ಪರಿವರ್ತನಾಕಾರರು ಮತ್ತು ಡಾ ಅಂಬೇಡ್ಕರ್: ಎಸ್.ಡಿ.ರಾಯಮನೆ, ಕರ್ನಾಟಕ ದಲಿತ ಸಂಘರ್ಷ ರಾಜ್ಯ ಸಮಿತಿ ಬೆಂಗಳೂರು. ಪುಟ ಸಂ. 89.
2. ಅದೇ, ಪುಟ ಸಂ. 89.
3. ಅದೇ, ಪುಟ ಸಂ. 30.

**ಪರಾಮರ್ಶನ ಕೃತಿಗಳು**

1. ಅಂಬೇಡ್ಕರ್ ಚಿಂತನೆಗಳ ಅನಂತ ಸಾಧ್ಯತೆಗಳು ಸಂ: ಡಾ. ಬಸವರಾಜ ಕಲ್ಗುಡಿ, ಪ್ರಸಾರಂಗ ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, 2009.
2. ಸಾಮಾಜಿಕ ಪರಿವರ್ತನಾಕಾರರು ಮತ್ತು ಡಾ. ಅಂಬೇಡ್ಕರ್: ಎಸ್. ಡಿ. ರಾಯಮನೆ, ಕರ್ನಾಟಕ ದಲಿತ ಸಂಘರ್ಷ ರಾಜ್ಯ ಸಮಿತಿ, ಬೆಂಗಳೂರು, 2012.
3. ಅಂಬೇಡ್ಕರ್‌ರ ಕ್ರಾಂತಿಕಾರಿ ವಿಚಾರಗಳು, ಸಂ: ಎನ್. ಬಿ. ರೋಡಗಿ, ಡಾ. ಶ್ರೀ. ಆ. ಚ. ನಿ. ಪ್ರಕಾಶನ, ಸಿಂದಗಿ ತಾಲೂಕು, ವಿಜಯಪುರ ಜಿಲ್ಲೆ, ಮಳಸಾವಳಗಿ, 2016.
4. ಅಂಬೇಡ್ಕರ್ ದೃಷ್ಟಿಯಲ್ಲಿ ಸಾಮಾಜಿಕ ನ್ಯಾಯ, ಕನ್ನಡಕ್ಕೆ: ಬಿ. ಸುಜ್ಞಾನಮೂರ್ತಿ, ಲಡಾಯಿ ಪ್ರಕಾಶನ, ಗದಗ, 2017.
5. ಬಾಬಾ ಸಾಹೇಬ್ ಡಾ.ಬಿ.ಆರ್ ಅಂಬೇಡ್ಕರ್ ಸಾಮಾಜಿಕ ಋಣ ಸಂದಾಯ: ಎನ್. ಸಿ. ಮುನಿಯಪ್ಪ ಸಿದ್ದಾರ್ಥ, ಪೌಂಡೇಶನ್, ಬೆಂಗಳೂರು, 2020.